139

78

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–226/2013

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 09/01/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ಶಿಫಾರಸ್ಸು ವರದಿ

ವಿಷಯ: 1 ರಿಂದ 3ನೇ ಎದುರುದಾರರುಗಳು ಕಾನೂನು ಬಾಹಿರವಾಗಿ ಅವರ ಪತ್ನಿಯರ ಹೆಸರಿನಲ್ಲಿ ಖಾತೆಯನ್ನು ಮಾಡಿಸಿಕೊಂಡಿರುವುದರ ಬಗ್ಗೆ ಹಾಗೂ 2ನೇ ಎದುರುದಾರರ ವಿರುದ್ದ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ಹಾಗೂ 5ನೇ ಎದುರುದಾರರು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ, ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ– ಕುರಿತು.,

*****

ಶ್ರೀ ಬಿ.ಆರ್.ರವಿಚಂದ್ರ ಬಿನ್ ಲೇಟ್ ರಂಗಪ್ಪ, ಬೊಮ್ಮನಹಳ್ಳಿ ಗ್ರಾಮ, ಬೇಲೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಮಹಾಲಿಂಗ, ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (2) ಶ್ರೀ ಮಂಜುನಾಥ್, ಬಿಲ್ ಕಲೆಕ್ಟರ್, ನೆಲ್ಲಿಗೆರೆ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (3) ಶ್ರೀ ಎಂ.ಜಿ. ಸುಂದರ್ ರಾಜು, ಶಿಕ್ಷಕರು, ಸರ್ಕಾರಿ ಶಾಲೆ, ಬೆಳ್ಳೂರು ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (4) ಶ್ರೀ ಪಿ.ಎಸ್.ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ

S/d

79

ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (5) ಶ್ರೀ ಡಿ.ಬಿ.ಚಂದ್ರಶೇಖರಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ನಿವೃತ್ತಿ: ನಂ. 15, 2ನೇ ಕ್ರಾಸ್, ಗಣಪತಿ ದೇವಸ್ಥಾನದ ರಸ್ತೆ, ವಿದ್ಯಾನಗರ, ಮೈಸೂರು) ಮತ್ತು, (6) ಶ್ರೀ ಕೆ.ಸಿ.ಕೃಷ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ) (ಇನ್ನು ಮುಂದೆ '1 ರಿಂದ 6ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ: 07/02/2005 ರಂದು ಆದೇಶ ಮಾಡಿರುತ್ತಾರೆ ಮತ್ತು ಅದರಂತೆ ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿದ್ದಾರೆ. ಆದರೆ 5ನೇ ಎದುರುದಾರರು ಗುಡಿಸಲು ನಿರ್ಮಿಸುವವರಿಗೆ ಹಕ್ಕು ಪತ್ರಗಳನ್ನು ನೀಡದೇ ನಿಯಮಗಳನ್ನು ಉಲ್ಲಂಘಿಸಿ 1 ರಿಂದ 3ನೇ ಎದುರುದಾರರ ಪತ್ನಿಯರಿಗೆ ಹಾಗೂ ಶ್ರೀಮಂತ ಮತ್ತು ರಾಜಕಾರಣಿ ಜನಗಳಿಗೆ ಹಕ್ಕು ಪತ್ರಗಳನ್ನು ನೀಡಿರುತ್ತಾರೆ. ಆ ರೀತಿ ಹಕ್ಕು ಪತ್ರಗಳನ್ನು ನೀಡಿದ ಮೇಲೆ 4ನೇ ಎದುರುದಾರರು ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಖಾತೆಗಳನ್ನು ಮಾಡಿರುತ್ತಾರೆ. 6ನೇ ಎದುರುದಾರರು ಸದರಿ ಸರ್ವೆ ನಂ. 40ರಲ್ಲಿ ಹಲವಾರು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಇರುವ ಜನರಿಗೆ ತೊಂದರೆ ನೀಡುತ್ತಿದ್ದಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ರವರು ದಿನಾಂಕ: 18/04/2015ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ದಿನಾಂಕ: 18/04/2015 ರಂದು ಖುದ್ದಾಗಿ ಗ್ರಾಮ ಪಂಚಾಯತಿಗೆ ಬೇಟಿ ನೀಡಿ ಕಡತಗಳನ್ನು ಪರಿಶೀಲಿಸಲಾಗಿ 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 2ನೇ ಎದುರುದಾರರಾದ ಶ್ರೀ

ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ 5ನೇ ಎದುರುದಾರರಾದ ಶ್ರೀ ಚಂದ್ರಶೇಖರ್ ರವರು ದಿನಾಂಕ: 12/08/2005 ರಲ್ಲಿ ಹಕ್ಕು ಪತ್ರಗಳನ್ನು ನೀಡಿರುತ್ತಾರೆಂದು, ಅದರ ವಿವರ ಈ ಕೆಳಕಂಡಂತೆ ಇರುತ್ತದೆಂದು ತಿಳಿಸಿರುತ್ತಾರೆ.

3. ಈ ಮೇಲ್ಕಂಡ ನಿವೇಶನದಾರರಾದ ಅಂದರೆ 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರು ದಿನಾಂಕ: 20/06/2008 ರಂದು, 2ನೇ ಎದುರುದಾರರಾದ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರು ದಿನಾಂಕ: 20/06/2008 ರಂದು ಹಾಗೂ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರು ದಿನಾಂಕ: 09/08/2008 ರಂದು ನೀಡಿರುವ ಅರ್ಜಿಯ ಮೇರೆಗೆ ಅಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕರನಿರ್ಧರಣಾ ಡಿಮ್ಯಾಂಡ್ ಪಟ್ಟಿಯ ನಮೂನೆಯ ಮುದ್ರಿತವಲ್ಲದ ರೋಲ್ಡ್ ಹಾಳೆಯನ್ನು ಬಳಸಿ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸೇರಿಸಿ 337ರಲ್ಲಿ 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 355ರಲ್ಲಿ 2ನೇ ಎದುರುದಾರರಾದ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 373ರಲ್ಲಿ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಖಾತೆ ಸಂಖ್ಯೆಗೆ ವರ್ಗಾವಣೆ ಮಾಡಿ ಅಂದಿನಿಂದ 2014–15ನೇ ಸಾಲಿನವರೆಗೆ ಕರನಿರ್ಧರಣ ಪಟ್ಟಿಯಲ್ಲಿ 3 ಜನ ಖಾತೆದಾರರ ಹೆಸರು ಚಾಲ್ತಿಯಲ್ಲಿರುತ್ತದೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು 1 ಮತ್ತು 3ನೇ ಎದುರುದಾರರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ವಿಚಾರಿಸಲಾಗಿ, ಸದರಿಯವರು ಮೇಲ್ಕಂಡ ಪ್ರಶ್ನಿತ ಹಕ್ಕು ಪತ್ರವನ್ನು ಪಡೆಯುವುದಕ್ಕಾಗಲೀ ಅಥವಾ ಖಾತೆ ಮಾಡಿಕೊಡಲು ಅರ್ಜಿಯನ್ನಾಗಲೀ ಅವರ ಪತ್ನಿಯರ ಮುಖಾಂತರ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ಇದು ಅಲ್ಲದೇ, 2ನೇ ಎದುರುದಾರರು ಹಾಲಿ ನಲ್ಲಿಗೆರೆ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ಬೊಮ್ಮೇನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ ನಿವೇಶನ ಪಡೆದಿರುವುದನ್ನು ಒಪ್ಪಿಕೊಂಡಿದ್ದು ಹಾಲಿ ಅನುಭದಲ್ಲಿರುತ್ತದೆಂದು ತಿಳಿಸಿರುತ್ತಾರೆಂದು ಹಾಗೂ

ಗ್ರಾಮ ಪಂಚಾಯತಿ ದಾಖಲೆಯಲ್ಲಿ ಇದುವರೆವಿಗೂ ಶ್ರೀಮತಿ ಬಿ.ಸವಿತಾ ಬಿನ್ ಮಂಜುನಾಥ್ ರವರ ಹೆಸರಿನಲ್ಲಿ ದಾಖಲೆ ಲಭ್ಯವಿರುತ್ತದೆಂದು ತಿಳಿಸಿರುತ್ತಾರೆ.

4. ದೂರುದಾರರ ದೂರಿಗೆ ಸಂಬಂಧಪಟ್ಟಂತೆ 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ತಾವು ಯಾವುದೇ ಹಕ್ಕು ಪತ್ರವನ್ನು ಹಾಗೂ ಖಾತೆಯನ್ನು ಪಡೆಯುವ ಸಲುವಾಗಿ ತಮ್ಮ ಪತ್ನಿಯರ ಮುಖಾಂತರ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. 4ನೇ ಎದುರುದಾರರಾದ–ಶ್ರೀ ಪಿ.ಎಸ್.ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ರವರು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದರಿಂದ 4ನೇ ಎದುರುದಾರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರ ಕಂಡಿಕೆ 61ರ ಆದೇಶದ ಮೇರೆಗೆ 4ನೇ ಎದುರುದಾರರ ಆಕ್ಷೇಪಣೆಗಳೇನು ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

6. 5ನೇ ಎದುರುದಾರರಾದ ಶ್ರೀ ಡಿ.ಬಿ.ಚಂದ್ರಶೇಖರಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ನಿವೃತ್ತಿ: ನಂ. 15, 2ನೇ ಕ್ರಾಸ್, ಗಣಪತಿ ದೇವಸ್ಥಾನದ ರಸ್ತೆ, ವಿದ್ಯಾನಗರ, ಮೈಸೂರು) ರವರು ದಿನಾಂಕ: 15/10/2013 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ, ಕೆಂಬಾರೆ ಗ್ರಾಮದ ಸರ್ವೆ ನಂ. 40 ರಲ್ಲಿರುವ ಸರ್ಕಾರಿ ಜಮೀನಿನಲ್ಲಿ ಕೇವಲ ಅನಧಿಕೃತವಾಗಿ 61 ಜನ ವಾಸವಾಗಿದ್ದು, ಇವರಿಗೆ ಮಾತ್ರ ಸ್ಥಳ ಪರಿಶೀಲನೆಯನ್ನು ಮಾಡಿ ಹಕ್ಕು ಪತ್ರವನ್ನು ನೀಡಲಾಗಿರುತ್ತದೆಂದು ಮತ್ತು ಉಳಿದ 62 ರಿಂದ ಮಾಡಿಕೊಂಡಿರುವ ಹಕ್ಕು ಪತ್ರಗಳ ಸಹಿಯು ಅವರದ್ದಾಗಿರುವುದಿಲ್ಲವೆಂದು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ನಾಗಮಂಗಲ ರವರ ಕಛೇರಿಗೆ ಸರ್ಕಾರಿ ನಿವೇಶನವನ್ನು ನೀಡುವಂತೆ ಕ್ರಮ ಸಂಖ್ಯೆ: 62ರ ಆನಂತರದ ವ್ಯಕ್ತಿಗಳು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಇವರುಗಳು ಸೃಷ್ಟಿಸಿಕೊಂಡಿರುವ ಅಕ್ರಮ ಹಕ್ಕುಪತ್ರಗಳಿಗೂ ಅವರಿಗೆ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ.

82 135

7. 6ನೇ ಎದುರುದಾರರಾದ ಶ್ರೀ ಕೆ.ಸಿ.ಕೃಷ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ) ರವರು ದಿನಾಂಕ: 26/09/2013 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ, ಬೊಮ್ಮನಹಳ್ಳಿ ಸರ್ವೆ ನಂ. 40ಕ್ಕೆ ಸಂಬಂಧಪಟ್ಟ ನಿವೇಸನಗಳ ಹಕ್ಕು ಪತ್ರಗಳನ್ನು ವಿತರಣೆ ಮಾಡಿರುವುದಿಲ್ಲ. ಜಿಲ್ಲಾಧಿಕಾರಿಗಳು ಕೇಳಲಾಗಿದ್ದ ವರದಿಯನ್ನು ತಹಶೀಲ್ದಾರ್, ನಾಗಮಂಗಲ ರವರೊಡನೆ ಚರ್ಚಿಸಿ ತಾಲ್ಲೂಕು ಸರ್ವೆಯರ್, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಹಾಯಕ ನಿರ್ದೇಶಕರು (ಉದ್ಯೋಗ), ತಾಲ್ಲೂಕು ಪಂಚಾಯತಿ, ನಾಗಮಂಗಲ ಇವರ ಜಂಟಿ ತನಿಖೆ, ಸ್ಥಳ ಮಹಜರ್ ಮಾಡಿ ಸಲ್ಲಿಸಲಾದ ವರದಿಯನ್ನು ಯಥಾವತ್ತಾಗಿ ಜಿಲ್ಲಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿರುತ್ತೇನೆ ಹಾಗೂ 1 ರಿಂದ 3ನೇ ಎದುರುದಾರರಿಗೆ ಅಥವಾ ಅವರ ಕಡೆಯವರಿಗೆ ಸಹಾಯ ಮಾಡಿ ಬೇರೆಯವರಿಗೆ ತೊಂದರೆ ಕೊಡುತ್ತಿರುವುದಾಗಿ ದೂರಿರುವುದು ಸುಳ್ಳು ಸಂಗತಿಯಾಗಿದೆ ಎಂದು ತಿಳಿಸಿರುತ್ತಾರೆ. 12(1)

8. ದಿನಾಂಕ: 19/01/2015 ರಂದು ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಅಲ್ಲಗಳೆಯುತ್ತಾ, ದೂರಿನಲ್ಲಿನ ಅಂಶಗಳನ್ನೇ ಪುನರಾವರ್ತನೆ ಮಾಡಿರುತ್ತಾರೆ.

9. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 1 ರಿಂದ 6ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ: 07/02/2005 ರಂದು ಆದೇಶ ಮಾಡಿರುತ್ತಾರೆ ಮತ್ತು ಅದರಂತೆ ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿದ್ದಾರೆ.

- 1 ರಿಂದ 3ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿರುತ್ತಾರೆ. ಹೀಗಿದ್ದರೂ ಸಹಾ, 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರು ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ 2ನೇ ಎದುರುದಾರರಾದ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ 5ನೇ ಎದುರುದಾರರಾದ ಶ್ರೀ ಡಿ.ಬಿ.ಚಂದ್ರಶೇಖರಯ್ಯ ರವರು ದಿನಾಂಕ: 12/08/2005 ರಲ್ಲಿ ಹಕ್ಕು ಪತ್ರಗಳನ್ನು ನೀಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದರೂ ಸಹಾ, ಅವರ ಪತ್ನಿ ಶ್ರೀಮತಿ ಜಯಲಕ್ಷ್ಮೀ ರವರು 4ನೇ ಎದುರುದಾರರಿಗೆ ದಿನಾಂಕ: 20/06/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 74ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕೊಂಡು ಅವರ ಪತ್ನಿಯ ಮುಖಾಂತರ 4ನೇ ಎದುರುದಾರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 2ನೇ ಎದುರುದಾರರು ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿದ್ದುಕೊಂಡು, ಅವರ ಪತ್ನಿ ಶ್ರೀಮತಿ ಸವಿತಾ ರವರು 4ನೇ ಎದುರುದಾರರಿಗೆ ದಿನಾಂಕ: 20/06/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 68ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ 2ನೇ ಎದುರುದಾರರು ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹಾ, ಅವರ ಪತ್ನಿಯ ಮುಖಾಂತರ 4ನೇ ಎದುರುದಾರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದರೂ ಸಹಾ, ಅವರ ಪತ್ನಿ ಶ್ರೀಮತಿ ಡಿ.ಎನ್.ಶೋಭಾ ರವರು 4ನೇ ಎದುರುದಾರರಿಗೆ ದಿನಾಂಕ: 09/10/2008 ರಂದು

84 133

ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 66ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕೊಂಡು ಅವರ ಪತ್ನಿಯ ಮುಖಾಂತರ 4ನೇ ಎದುರುದಾರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 12(1)

- 4ನೇ ಎದುರುದಾರರಾದ ಶ್ರೀ ಪಿ.ಎಸ್.ಪುಟ್ಟೇಗೌಡ ರವರು 1 ರಿಂದ 3ನೇ ಎದುರುದಾರರುಗಳ ಪತ್ನಿಯರು ಖಾತೆ ಮಾಡಿಕೊಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸದೇ, ಕಾನೂನು ಬಾಹಿರವಾಗಿ ಕರನಿರ್ಧರಣಾ ಡಿಮ್ಯಾಂಡ್ ಪಟ್ಟಿಯ ನಮೂನೆಯ ಮುದ್ರಿತವಲ್ಲದ ರೋಲ್ಡ್ ಹಾಳೆಯನ್ನು ಬಳಸಿ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸೇರಿಸಿ 337ರಲ್ಲಿ 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 355ರಲ್ಲಿ 2ನೇ ಎದುರುದಾರರಾದ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 373ರಲ್ಲಿ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಖಾತೆ ವರ್ಗಾವಣೆ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಕಂಡುಬರುತ್ತದೆ.
- 6ನೇ ಎದುರುದಾರರಾದ ಶ್ರೀ ಕೆ.ಸಿ.ಕೃಷ್ಣಪ್ಪ ರವರು, 5ನೇ ಎದುರುದಾರರು ಕಾನೂನು ಬಾಹಿರವಗಿ ವಿತರಿಸಿರುವ ಹಕ್ಕುಪತ್ರಗಳನ್ನು ಹಾಗೂ 4ನೇ ಎದುರುದಾರರು ಕಾನೂನು ಬಾಹಿರವಾಗಿ ಮಾಡಿರುವ ಖಾತೆಗಳನ್ನು ಸೂಕ್ಷ್ಮವಾಗಿ ಗಮನಿಸದೇ, ದೂರುದಾರರಿಗೆ ತೊಂದರೆ ನೀಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '1 ರಿಂದ 6ನೇ ಎದುರುದಾರರುಗಳು' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '1 ರಿಂದ 6ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ

Sd/-

ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

11. 2ನೇ ಎದುರುದಾರರಾದ ಶ್ರೀ ಮಂಜುನಾಥ್, ಬಿಲ್ ಕಲೆಕ್ಟರ್ ರವರು ಸರ್ಕಾರಿ ನೌಕರರಾಗಿರುವುದಿಲ್ಲ. ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

12. 5ನೇ ಎದುರುದಾರರಾದ ಶ್ರೀ ಡಿ.ಬಿ.ಚಂದ್ರಶೇಖರಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ನಿವೃತ್ತಿ: ನಂ. 15, 2ನೇ ಕ್ರಾಸ್, ಗಣಪತಿ ದೇವಸ್ಥಾನದ ರಸ್ತೆ, ವಿದ್ಯಾನಗರ, ಮೈಸೂರು) ರವರು ಈಗಾಗಲೇ ನಿವೃತ್ತಿ ಹೊಂದಿರುತ್ತಾರೆ. ಸದರಿ ಕರ್ತವ್ಯ ಲೋಪವು 2005ನೇ ಸಾಲಿನದ್ದಾಗಿದ್ದು, ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 5ನೇ ಎದುರುದಾರರ ವಿರುದ್ದ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಆದ್ದರಿಂದ, ಸದರಿ 5ನೇ ಎದುರುದಾರರ ವಿರುದ್ಧ, ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಆಗಿರುವ ನಷ್ಟವನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಬೇಕಾಗಿರುತ್ತದೆ.

13. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಈ ಕೆಳಕಂಡ ಅಂಶಗಳ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

(1) 1 ರಿಂದ 3ನೇ ಎದುರುದಾರರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿರುತ್ತಾರೆ. ಹೀಗಿದ್ದರೂ ಸಹಾ, 1ನೇ ಎದುರುದಾರರಾದ ಶ್ರೀ ಮಹಾಲಿಂಗ ರವರು ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರ ಹೆಸರಿನಲ್ಲಿ, 2ನೇ ಎದುರುದಾರರಾದ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರ ಹೆಸರಿನಲ್ಲಿ

86 (87)

ಹಾಗೂ 3ನೇ ಎದುರುದಾರರಾದ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರ ಹೆಸರಿನಲ್ಲಿ 5ನೇ ಎದುರುದಾರರಾದ ಶ್ರೀ ಡಿ.ಬಿ.ಚಂದ್ರಶೇಖರಯ್ಯ ರವರ ಮುಖಾಂತರ ದಿನಾಂಕ: 12/08/2005 ರಂದು ಹಕ್ಕು ಪತ್ರಗಳನ್ನು ಪಡೆದು ನಂತರ 4ನೇ ಎದುರುದಾರರ ಮುಖಾಂತರ ಅಕ್ರಮವಾಗಿ ಖಾತೆಗಳನ್ನು ಮಾಡಿಕೊಂಡಿರುವುದರ ಬಗ್ಗೆ ಕಾನೂನು ರೀತ್ಯಾ ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ. 12(1)

(2) 2ನೇ ಎದುರುದಾರರಾದ ಶ್ರೀ ಮಂಜುನಾಥ್, ಬಿಲ್ ಕಲೆಕ್ಟರ್ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

(3) 5ನೇ ಎದುರುದಾರರಾದ ಶ್ರೀ ಡಿ.ಬಿ.ಚಂದ್ರಶೇಖರಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ನಿವೃತ್ತಿ) ವಾಸ ಸ್ಥಳ: ನಂ. 15, 2ನೇ ಕ್ರಾಸ್, ಗಣಪತಿ ದೇವಸ್ಥಾನದ ರಸ್ತೆ, ವಿದ್ಯಾನಗರ, ಮೈಸೂರು) ರವರು ಈಗಾಗಲೇ ನಿವೃತ್ತಿ ಹೊಂದಿರುತ್ತಾರೆ. ಸದರಿ ಕರ್ತವ್ಯ ಲೋಪವು 2005ನೇ ಸಾಲಿನದ್ದಾಗಿದ್ದು, ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 5ನೇ ಎದುರುದಾರರ ವಿರುದ್ದ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಆದ್ದರಿಂದ, ಸದರಿ 5ನೇ ಎದುರುದಾರರ ವಿರುದ್ಧ, ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು

ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

9-1-17.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**

9/1/17